ನೆರವಿನಿಂದ ನಾವಿಂದು ಬಾಲ್ಯವಿವಾಹ ತಡೆಯಬಹುದಾಗಿದೆ. ಇದರಿಂದ ಎಷ್ಟೋ ಹೆಣ್ಣುಮಕ್ಕಳ ಜೀವ ಉಳಿಸಲು ಸಾಧ್ಯವಾಗಿದೆ. ಬಾಲ್ಯದಲ್ಲೇ ವಿವಾಹಕ್ಕೊಳಗಾದ ಹೆಣ್ಣುಮಕ್ಕಳು ಚಿಕ್ಕ ವಯಸ್ಸಿನಲ್ಲೇ ಗರ್ಭಿಣಿಯರಾಗಿ ಸಾವಿಗೀಡಾಗುತ್ತಿದ್ದರು. ಈ ನಿಟ್ಟಿನಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ ಹೆಣ್ಣುಮಕ್ಕಳ ಪಾಲಿಗೆ ವರವಾಗಿದೆ.

ಸ್ವಾತಂತ್ರ್ಯ ದೊರೆತ ಎಷ್ಟೋ ವರ್ಷಗಳ ನಂತರ ವರದಕ್ಷಿಣೆ ನಿಷೇಧ ಕಾನೂನು (1961) ಜಾರಿಗೆ ಬಂದಿದೆ. ಅದಕ್ಕೂ ಮುನ್ನ ಹೆಣ್ಣುಮಕ್ಕಳ ಸ್ಥಿತಿ ಕಷ್ಟಕರವಾಗಿತ್ತು. ವರದಕ್ಷಿಣೆ ಪಡೆಯುವುದು, ಕೊಡುವುದು ತಪ್ಪು ಎಂಬ ಕಾನೂನು ಜಾರಿಗೆ ಬಂದರೂ, ನಮ್ಮ ಜನರು ಹಾಗೂ ಅವರ ಪೋಷಕರು ಅದನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಹೆಣ್ಣನ್ನು ಮದುವೆ ಮಾಡಿಕೊಡುವಾಗ ಅವಳ ಜತೆಗೆ ಗಂಡನ ಮನೆಗೆ ಏನಾದರೂ ಕೊಟ್ಟರೆ ಮಾತ್ರ ಮದುವೆ ಎಂಬುದು ಪರಿಪೂರ್ಣ ಎಂಬ ನಂಬಿಕೆ ಆಳವಾಗಿ ಬೇರೂರಿತ್ತು. ವರದಕ್ಷಿಣೆ ಕೊಟ್ಟು ಮದುವೆ ಮಾಡುವುದು ಅಂದರೆ ವರನನ್ನು ಕೊಂಡುಕೊಂಡಂತೆಯೇ ಲೆಕ್ಕ. ಹಾಗೆ ನೋಡಿದರೆ, ವರದಕ್ಷಿಣೆಯನ್ನು ಹೆಣ್ಣು ಮತ್ತು ಗಂಡು ಇಬ್ಬರ ಮನೆಯವರೂ ವಿರೋಧಿಸಬೇಕಿತ್ತು. ವರದಕ್ಷಿಣೆ ಕಾರಣಕ್ಕಾಗಿಯೇ ಆಗಿನ ಕಾಲದಲ್ಲಿ ಎಷ್ಟೋ ಹೆಣ್ಣುಮಕ್ಕಳ ಮದುವೆಯೇ ಆಗಲಿಲ್ಲ. ಅವಿವಾಹಿತರಾಗಿಯೇ ಉಳಿದುಬಿಡುತ್ತಿದ್ದರು ಇಲ್ಲವೇ ಎರಡನೆಯ ಸಂಬಂಧಕ್ಕೆ ಮದುವೆ ಆಗಬೇಕಿತ್ತು. ಹೆಣ್ಣಿಗೆ ಆಯ್ಕೆ ಸ್ವಾತಂತ್ರ್ಯವೇ ಇರಲಿಲ್ಲ.

ವರದಕ್ಷಿಣೆ ನಿಷೇಧ ಕಾಯ್ದೆ ಜಾರಿಗೆ ತಂದರೂ ಪ್ರಬಲರು ಮಾತ್ರ ನುಣುಚಿಕೊಳ್ಳುತ್ತಿದ್ದರು. ಆದರೆ, ಯಾವಾಗ ವರದಕ್ಷಿಣೆ ಕಾರಣಕ್ಕಾಗಿ ಸಾವು–ನೋವು ಆಗತೊಡಗಿದವೋ ಆಗ ಜನಜಾಗೃತಿ ಉಂಟಾಯಿತು. ಕಾನೂನು ಮತ್ತಷ್ಟು ಬಲಿಷ್ಠವಾಯಿತು. ದಶಕದ ಹಿಂದಿನ ಅಂಕಿಅಂಶಗಳನ್ನು ಗಮನಿಸಿದರೆ ವರದಕ್ಷಿಣೆ ಸಾವುಗಳ ಸಂಖ್ಯೆ ಕಡಿಮೆಯಾಗಿದೆ. ವರದಕ್ಷಿಣೆ ಕೇಳಿದ್ದಾರೆ ಎಂಬ ಕಾರಣಕ್ಕಾಗಿಯೇ ಮದುವೆ ಮಂಟಪದಿಂದ ವಧುಗಳು ಎದ್ದು ಹೊರಬಂದ ಸುದ್ದಿಗಳೂ ಇಂದು ಮಾಧ್ಯಮಗಳಲ್ಲಿ ವರದಿಯಾಗುತ್ತಿವೆ. ಆದರೂ ವರದಕ್ಷಿಣೆ ಪದ್ಧತಿ ಇನ್ನೂ ಪೂರ್ತಿಯಾಗಿ ಹೋಗಿಲ್ಲ. ಹೆಣ್ಣು–ಗಂಡು ಸಮಾನರು ಎಂಬ ಸಂದೇಶ ಸಾರಿದ ಈ ಕಾನೂನಿನಿಂದ ಹೆಣ್ಣುಮಕ್ಕಳ ಜೀವನ ಸ್ವಲ್ಪವಾದರೂ ಬದಲಾಯಿತು ಎಂಬುದನ್ನು ಅಲ್ಲಗಳೆಯುವಂತಿಲ್ಲ.

## ಚಪಲ ಚಿತ್ತಕ್ಕೆ ಕಡಿವಾಣ

ಹೆಂಡತಿ ಇದ್ದರೂ ಮತ್ತೊಂದು ಹೆಣ್ಣಿಗೆ ಆಕರ್ಷಿತನಾಗಿ ಎರಡನೇ ವಿವಾಹವಾಗುತ್ತಿದ್ದ ಸಂದರ್ಭಗಳಲ್ಲಿ, ಮೊದಲ ಪತ್ನಿಗೆ ಅನ್ಯಾಯವಾಗುತ್ತಿತ್ತು. ದ್ವಿಪತ್ನಿತ್ವ, ಬಹುಪತ್ನಿತ್ವ ಒಂದು ರೀತಿಯಲ್ಲಿ ಹೆಣ್ಣಿನ ಶೋಷಣೆಯ ಮತ್ತೊಂದು ರೂಪವಾಗಿದ್ದವು. ಹಾಗಾಗಿ, ದ್ವಿಪತ್ನಿತ್ವ ಮತ್ತು ಬಹುಪತ್ನಿತ್ವವನ್ನು ಅಪರಾಧವೆಂದು ಪರಿಗಣಿಸಿ ಕಾನೂನು ರೂಪಿಸಲಾಗಿದೆ. ಆದರೆ, ಇಂಥ ಕಾನೂನನ್ನು ಪುರುಷರೇ ಮಾಡಿರುವುದರಿಂದ ಇಲ್ಲೂ ಕೆಲ ಲೋಪದೋಷಗಳು ಉಳಿದಿವೆ.

ಗಂಡ ಎರಡನೇ ವಿವಾಹವಾದರೆ, ಸಾಂಪ್ರದಾಯಿಕವಾಗಿ ಮದುವೆಯಾದ ಮೊದಲ ಪತ್ನಿಯೇ ಗಂಡನ ವಿರುದ್ಧ ದೂರು ನೀಡಬೇಕು ಎಂಬ ನಿಯಮ ಮಾಡಲಾಗಿದೆ. ಇಂಥ ಸಂದರ್ಭಗಳಲ್ಲಿ ಪತ್ನಿಯ ಅತ್ತೆ ಮಾವ, ತವರುಮನೆಯವರು ದೂರು ಕೊಟ್ಟರೆ ಕೇಸ್ ನಿಲ್ಲುವುದಿಲ್ಲ. ಇದರಲ್ಲಿನ ಮತ್ತೊಂದು ತೊಡಕೆಂದರೆ, ಎರಡನೇ ವಿವಾಹವನ್ನೂ ಕಾನೂನುಬದ್ಧವಾಗಿ ಆಗಿದ್ದಾನೆಯೇ ಎಂಬುದನ್ನು ಸಾಬೀತು ಮಾಡಬೇಕು. ಆದರೆ, ಸರ್ಕಾರಿ ನೌಕರಿಯಲ್ಲಿರುವ ಗಂಡು/ಹೆಣ್ಣು ಎರಡನೇ ವಿವಾಹ ಆಗಬೇಕಿದ್ದರೆ ಕಾನೂನುಬದ್ಧವಾಗಿ ವಿಚ್ಛೇದನ ಪಡೆದಿರಬೇಕು ಎಂಬ ನಿಯಮ ರೂಪಿಸಲಾಗಿದೆ.

ಎರಡನೇ ಮದುವೆ ಅಥವಾ ಸಂಬಂಧವನ್ನು ಹೊಂದಿರುವ ಗಂಡನಿಗೆ ಹುಟ್ಟಿದ ಮಕ್ಕಳು ಆತನ ಪಿತ್ರಾರ್ಜಿತ ಆಸ್ತಿಗೆ ಹಕ್ಕುದಾರರಾಗಿರುತ್ತಾರೆ. ಅಷ್ಟೇ ಅಲ್ಲ, ಎರಡನೇ ಹೆಂಡತಿ ಅಥವಾ ಸಂಬಂಧ ಹೊಂದಿದವಳು ಜೀವನಾಂಶ ಪಡೆಯಲು ಅರ್ಹಳು ಎಂಬುದೂ ಇಲ್ಲಿ ಗಮನೀಯ. ಮೊದಲ ಪತ್ನಿ ಇದ್ದು ಅದನ್ನು ಮುಚ್ಚಿಟ್ಟು ಎರಡನೇ ಪತ್ನಿಯಾದವಳಿಗೆ ಜೀವನಾಂಶದ ಹಕ್ಕು ಹಾಗೂ ಆಕೆಯ ಮಕ್ಕಳಿಗೆ ಆಸ್ತಿಯ ಹಕ್ಕು ದೊರೆಯುವುದು ಆಕೆಗೆ ಪಾಲಿಗೆ ವರ. ಆದರೆ, ಆ ಸಂಗತಿ ಮೊದಲ ಪತ್ನಿಯನ್ನು ಸಂಕಷ್ಟಕ್ಕೆ ದೂಡಬಹುದು. ಜೀವನಾಂಶ ಪಡೆಯುವ ವಿಚಾರದಲ್ಲಿ ನಮ್ಮ ಕಾನೂನು ಜೆಂಡರ್ ನ್ಯೂಟ್ರಲ್ ಆಗಿದೆ. ಅಂದರೆ ಇಲ್ಲಿ ಗಂಡೂ ಹೆಣ್ಣಿನಿಂದ ಜೀವನಾಂಶ ಕೇಳಬಹುದು.

## ಕೌಟುಂಬಿಕ ದೌರ್ಜನ್ಯ ವಿರೋಧಿ ಅಸ್ತ್ರ

ವರದಕ್ಷಿಣೆ ನಿಷೇಧ ಕಾಯ್ದೆಯ ಬಳಿಕ ಬಂದ ಮತ್ತೊಂದು ಪ್ರಬಲ ಕಾನೂನೆಂದರೆ 'ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ 2005'. ಗಂಡನ ಮನೆಯಲ್ಲಿ ಹೆಣ್ಣಿನ ಮೇಲಾಗುತ್ತಿದ್ದ ದೌರ್ಜನ್ಯ ತಡೆಯಲು ಇದೊಂದು ಪ್ರಬಲ ಅಸ್ತ್ರವಾಗಿಯೇ ರೂಪುಗೊಂಡಿತು. ನಾಲ್ಕು ಗೋಡೆಗಳ ಮಧ್ಯೆ ತನ್ನ ಮೇಲೆ ನಡೆಯುತ್ತಿದ್ದ ದೌರ್ಜನ್ಯವನ್ನು ಹೇಳಿಕೊಳ್ಳಲಾಗದೇ ಎಷ್ಟೋ ಹೆಣ್ಣುಮಕ್ಕಳು ನರಳುತ್ತಿದ್ದರು. ತವರು ಮನೆ, ಸಂಬಂಧಿಕರಲ್ಲಿ ಹೇಳಿಕೊಂಡರೂ ಪರಿಹಾರ ಸಿಗದೇ ಒದ್ದಾಡುತ್ತಿದ್ದರು. ಅಂಥವರ ಪಾಲಿಗೆ ಈ ಕಾಯ್ದೆ ನೆರವಿಗೆ ಬಂತು.

ಅದಕ್ಕೂ ಮುಂಚಿನ ದಿನಗಳಲ್ಲಿ ಹೆಂಡತಿಯ ಮೇಲೆ ಗಂಡ ಕೈ ಮಾಡಿದರೂ ಅದು ದೌರ್ಜನ್ಯ ಎನಿಸುತ್ತಿರಲಿಲ್ಲ. ಗಂಡಸು ತನ್ನ ಸಿಟ್ಟು, ಸೆಡವುಗಳನ್ನು ತೀರಿಸಿಕೊಳ್ಳಲು ಹೆಣ್ಣನ್ನು 'ಪಂಚಿಂಗ್ ಬ್ಯಾಗ್' ರೀತಿ ಬಳಸಿಕೊಳ್ಳುತ್ತಿದ್ದ. ಹೊಡೆದವನು ಗಂಡ

